**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.31/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಚಿನ್ನಪ್ಪ ಹಾನಗಲ್ | ಸಿಡಬ್ಲ್ಯೂ | 2 |
| ತಂದೆ ಹೆಸರು | ಶಿವಪ್ಪ | ಪಿಡಬ್ಲ್ಯೂ | 2 |
| ವಯಸ್ಸು | 66 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಬಿಂಗಾಪೂರ ತಾಃ ಹಾನಗಲ್ | | |

**<u>ದಿಃ 04.06.2025 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.</u>**

**1).** ನಾನು ಈಗ ನಿ.ಪಿ-2 ಮತ್ತು 3 ದಾಖಲಾತಿಗಳನ್ನು ನೋಡುತ್ತಿದ್ದು, ಅದರಲ್ಲಿ ನಿ.ಪಿ-2 ಘಟನಾ ಸ್ಥಳದ ಪಂಚನಾಮೆಯಾಗಿದ್ದು ಮತ್ತು ನಿ.ಪಿ-3 ಘಟನಾ ಸ್ಥಳದ ಕಚ್ಚಾ ನಕಾಶೆ ಆಗಿದ್ದು, ಅದರಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ, ಸದರಿ ಸಾಕ್ಷಿದಾರರ ಸಹಿಯನ್ನು ನಿ.ಪಿ-2(ಬಿ) ಮತ್ತು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಈಗ ಮೂರು ವರ್ಷಗಳ ಹಿಂದೆ ಹಾವೇರಿಯ ತಹಶೀಲ್ದಾರ ಕಛೇರಿಗೆ ನಾನು ಮತ್ತು ಚಾ.ಸಾ-3 ರವರು ಕೆಲಸಕ್ಕಾಗಿ ಬಂದಾಗ ಆ ಸಮಯದಲ್ಲಿ ತಹಶೀಲ್ದಾರ ಕಛೇರಿಯ ಮುಂದೆ ಆರೋಪಿಗಳಿಬ್ಬರೂ ಜಗಳವಾಡುತ್ತಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಮತ್ತು ಪೊಲೀಸರು ನನ್ನನ್ನು ವಿಚಾರಣೆಗಾಗಿ ಘಟನಾ ಸ್ಥಳದಲ್ಲಿ ಘಟನೆ ನಡೆದಾಗ ಹಾವೇರಿಯ ತಹಶೀಲ್ದಾರ ಕಛೇರಿಗೆ ಕರೆಯಿಸಿ ನನ್ನನ್ನು ಮತ್ತು ಚಾ.ಸಾ3 ರವರನ್ನು ತಹಶೀಲ್ದಾರ ಕಛೇರಿಗೆ ಕರೆಯಿಸಿ ವಿಚಾರಣೆ ಮಾಡಿದಾಗ ನಾನು ಮತ್ತು ಚಾ.ಸಾ-3 ತಹಶೀಲ್ದಾರ ಕಛೇರಿಗೆ ಬಂದಾಗ ಆರೋಪಿತರಿಬ್ಬರೂ ಜಗಳ ಮಾಡುತ್ತಿದ್ದರು, ನಾವು ಅಷ್ಟೇ ನೋಡಿದ್ದೇವೆ, ಮುಂದೆ ಏನಾಗಿರುತ್ತದೆ ಎಂದು ಗೊತ್ತಿರುವದಿಲ್ಲ.

**2)** ಆ ಸಮಯದಲ್ಲಿ ಚಾ.ಸಾ-1 ಶಿವಲಿಂಗಪ್ಪ ಮತ್ತು ನಾನು ಹಾಗೂ ಚಾ.ಸಾ-3 ಹೊನ್ನಪ್ಪ ಮೂರು ಜನ ಇದ್ದೇವು. ಪೊಲೀಸರಿಗೆ ಚಾ.ಸಾ-1 ಶಿವಲಿಂಗಪ್ಪ ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ನಂತರ ಪೊಲೀಸರು ನನ್ನ ಸಮಕ್ಷಮ ಮತ್ತು ಚಾ.ಸಾ-1 ಇವರ ಸಮಕ್ಷಮ ಹಾಗೂ ಚಾ.ಸಾ-3 ಇವರ ಸಮಕ್ಷಮ ಬೆಳಗಿನ 11-00

ಘಂಟೆಯಿಂದ 11-45 ಘಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಬರೆದಿರುತ್ತಾರೆ. ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿಯು ನೋಡುತ್ತಿದ್ದು, ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಪೊಲೀಸರು ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ಸಹ ನನ್ನ ಸಮಕ್ಷಮ ತಯಾರು ಮಾಡಿರುತ್ತಾರೆ. ಸದರಿ ಕಚ್ಚಾ ನಕಾಶೆಯು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿರುತ್ತದೆ ಮತ್ತು ಸಾಕ್ಷಿಗೆ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡುವಾಗ ಪೋಟೋ ತೆಗೆದಿದ್ದು, ಸದರಿ ಪೋಟೋವನ್ನು ಗುರುತಿಸಿ ಅದರಲ್ಲಿ ತಾನು ಇರುವದಾಗಿ ಹೇಳಿರುತ್ತಾರೆ. ಸದರಿ ಪೋಟೋವನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ಆರೋಪಿತರ ಪರವಾಗಿಃ**

**3)** ಪ್ರಾ.ಸಾ-1 ಶಿವಲಿಂಗಪ್ಪ ಮತ್ತು ನಾವು ಸಂಬಂಧಿಕರಾಗಬೇಕು ಅಂದರೆ ಸರಿಯಲ್ಲ, ಆದರೆ ಒಂದೇ ಕುಲದವರಾಗಿರುತ್ತೇವೆ. ನನ್ನ ಕೃಷಿ ಜಮೀನುಗಳು ಹಾನಗಲ್ ತಾಲೂಕಿನಲ್ಲಿ ಇರುತ್ತವೆ, ಆದರೆ ಹಾವೇರಿ ತಾಲೂಕಿನಲ್ಲಿ ಇರುವದಿಲ್ಲ ಅಂದರೆ ಸರಿಯಲ್ಲ. ಚಾ.ಸಾ-3 ಹೊನ್ನಪ್ಪ ತಂದೆ ಬಸವಣ್ಣೆಪ್ಪ ಈತನು ಹಾವೇರಿ ತಾಲೂಕು ದೇವಗಿರಿ ಗ್ರಾಮದವನಾಗಿರುತ್ತಾನೆ ಅಂದರೆ ಸರಿ. ಚಾ.ಸಾ-3 ಹೊನ್ನಪ್ಪ ನಾನು ಹಾವೇರಿಗೆ ಬಂದಾಗ ನನ್ನ ಜೊತೆ ಕೂಡುತ್ತಾನೆ, ಆದ್ದರಿಂದ ಆತನು ನನಗೆ ಪರಿಚಯವಿರುತ್ತಾನೆ. ಘಟನೆ ಆದ ದಿವಸವೇ ಪೊಲೀಸರು ನನಗೆ ನೋಟಿಸನ್ನು ಕೊಟ್ಟಿದ್ದರು. ನಾನು ಘಟನೆ ಆದ ದಿವಸ ಮಾತ್ರ ಘಟನಾ ಸ್ಥಳದಲ್ಲಿದ್ದೇನು, ನಂತರದಲ್ಲಿ ಘಟನಾ ಸ್ಥಳಕ್ಕೆ ಹೋಗಿರುವದಿಲ್ಲ. ಘಟನಾ ಸ್ಥಳದಲ್ಲಿ ತಹಶೀಲ್ದಾರ ಕಛೇರಿ ಮತ್ತು ಉಪ ಕಂದಾಯ ಆಯುಕ್ತರ ಕಛೇರಿ ಹಾಗೂ ನೊಂದಣಾಧಿಕಾರಿಗಳ ಕಛೇರಿ ಮತ್ತು ಎಡಿಎಲ್ಆರ್ ಇವರ ಕಛೇರಿಗಳು ಒಂದೇ ಕಟ್ಟಡದಲ್ಲಿ ಇರುತ್ತವೆ ಅಂದರೆ ಸರಿ. ಸದರಿ ಕಟ್ಟಡಕ್ಕೆ ಹೋಗಲು ಕೇವಲ ಒಂದೇ ದಾರಿ ಇದೆ ಮತ್ತು ಒಂದೇ ಗೇಟು ಇರುತ್ತದೆ ಅಂದರೆ ಸರಿ. ಸದರಿ ಘಟನಾ ಸ್ಥಳದಲ್ಲಿ ಪ್ರತಿ ದಿವಸ ಸಾವಿರಾರು ಜನ ಇರುತ್ತಾರೆ ಅಂದರೆ ಸರಿ.

**4)** ಪ್ರಾ.ಸಾ-1 ಶಿವಲಿಂಗಪ್ಪ ಈತನ ಊರು ಗಣಜೂರ ಅಂದರೆ ನನಗೆ ಗೊತ್ತಿರುವದಿಲ್ಲ. ನಾನು ಪ್ರಾ.ಸಾ-1 ಶಿವಲಿಂಗಪ್ಪ ಈತನ ಜೊತೆ ಹಾವೇರಿಯ ತಹಶೀಲ್ದಾರ ಕಛೇರಿಗೆ ಹೋಗಿರುವದಿಲ್ಲ. ಪೊಲೀಸರು ನೋಟಿಸ ಕೊಟ್ಟ ನಂತರ ಘಟನಾ ಸ್ಥಳದಲ್ಲಿ ಬರೆದಂತಹ ದಾಖಲಾತಿಯಲ್ಲಿ ಕೇವಲ ಸಹಿ ಮಾಡು ಅಂದಾಗ

ನಾನು ಸಹಿ ಮಾತ್ರ ಮಾಡಿರುತ್ತೇನೆ. ಏಕೆಂದರೆ ನನಗೆ ಕನ್ನಡ ಭಾಷೆ ಒದಲು ಬರುವದಿಲ್ಲ. ನನಗೆ ಕನ್ನಡದಲ್ಲಿ ಸಹಿ ಮಾಡಲು ಬರುವದಿಲ್ಲ ಅಂದರೆ ಸರಿಯಲ್ಲ. ನಾನು ಹೆಬ್ಬೆಟ್ಟು ಗುರುತು ಹಾಕುತ್ತೇನೆ ಅಂದರೆ ಸರಿಯಲ್ಲ. ಪೊಲೀಸರು ಚಾ.ಸಾ-3 ಹೊನ್ನಪ್ಪ ಮತ್ತು ನನ್ನನ್ನು ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ನಿ.ಪಿ-4 ರಂತೆ ಇಬ್ಬರೂ ಪೋಟೋವನ್ನು ತೆಗೆದು, ನಂತರ ನಿ.ಪಿ-2 ಘಟನಾ ಸ್ದಳದ ಪಂಚನಾಮೆಯ ಮೇಲೆ ಸಹಿ ಪಡೆದಿರುತ್ತಾರೆ ಮತ್ತು ಘಟನಾ ಸ್ದಳದಲ್ಲಿ ತಯಾರಿಸಿದ ಕಚ್ಚಾ ನಕಾಶೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ ಮತ್ತು ಅದನ್ನು ಓದಿ ನನ್ನ ಮುಂದೆ ಹೇಳಿರುವದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಘಟನಾ ಸ್ದಳದ ಪಂಚನಾಮೆ ಮಾಡದೇ ಇದ್ದರೂ, ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ನಿ.ಪಿ-4 ಪೋಟೋ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.